ದಿನಾಂಕ : DATE: 30/10/20
ಪತ್ರಿಕೆಯ ಹೆಸರು : NAME OF THE NEWS PAPER:

## ಜನರೇ ಎಚ್ಚರ ವಹಿಸದಿದ್ದರ ಭಾರತಕ್ಕೂ ಕಾದಿದೆ ದುರ್ದಿನ | ಜವಾಬ್ದಾರಿಯಿಂದ ವರ್ತಿಸಿ, ಇನ್ನೊಂದು ಲಾಕ್‌ಡೌನ್ ತಪ್ಪಿಸಿ

# ಫ್ರಾನ್ಸ್, ಜರ್ಮನಿ ಮತ್ತೆ ಲಾಕ್!

### ಯುರೋಪ್‌ನ ಹಲ ರಾಷ್ಟ್ರಗಳಲ್ಲಿ ಕೊರೋನಾ ಸೋಂಕಿನ ಸುನಾಮಿ | ಸ್ಪೇನಲ್ಲಿ ರಾತ್ರಿ ಕರ್ಫ್ಯೂ ಮಾರ್ಚ್, ಏಪ್ರಿಲ್‌ನಲ್ಲಿ ಇದ್ದುದಕ್ಕಿಂತ 2–3 ಪಟ್ಟು ಹೆಚ್ಚು | ಸೋಂಕು ನಿಗ್ರಹಕ್ಕೆ ಅನೇಕ ಕ್ರಮ

ಪ್ಯಾರಿಸ್/ಬರ್ಲಿನ್: ಮಾರ್ಚ್–ಏಪ್ರಿಲ್‌ನಲ್ಲಿ ಕೊರೋನಾ ವೈರಸ್ ಅಬ್ಬರದಿಂದ ತೀವ್ರ ನಲುಗಿ ಬಳಿಕ ಭಾರಿ ಪ್ರಮಾಣದಲ್ಲಿ ಚೇತರಿಸಿಕೊಂಡಿದ್ದ ಯುರೋಪ್‌ನಲ್ಲಿ ಕೊರೋನಾ 2ನೇ ಅಲೆ ಕಾಣಿಸಿಕೊಂಡಿದ್ದು, ಅಧಿಕ ಪ್ರಮಾಣದಲ್ಲಿ ಸೋಂಕಿತರು ಕಂಡುಬರುತ್ತಿದ್ದಾರೆ. ಹೀಗಾಗಿ ಐರೋಪ್ಯ ದೇಶಗಳು ಕೊರೋನಾದಿಂದ ಮತ್ತೊಮ್ಮೆ ಜರ್ಜರಿತವಾಗುವಂತಾಗಿದೆ.

**2ನೇ ಅಲೆ**

ಫ್ರಾನ್ಸ್, ಜರ್ಮನಿ, ಬ್ರಿಟನ್, ಇಟಲಿ, ಸ್ಪೇನ್, ಬೆಲ್ಜಿಯಂ, ಚೆಕ್ ಗಣರಾಜ್ಯ, ಪೋಲೆಂಡ್‌ನಲ್ಲಿ ಭಾರಿ ಪ್ರಕರಣಗಳು ಕಂಡುಬರುತ್ತಿವೆ. ಫ್ರಾನ್ಸ್, ಜರ್ಮನಿಯಲ್ಲಿ ಮತ್ತೊಂದು ಸುತ್ತಿನ ಲಾಕ್‌ಡೌನ್ ಘೋಷಣೆ ಮಾಡಲಾಗಿದೆ. ಬ್ರಿಟನ್, ಸ್ಪೇನ್, ಇಟಲಿ, ಚೆಕ್ ಗಣರಾಜ್ಯದಲ್ಲಿ ಹಲವು ನಿರ್ಬಂಧಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುತ್ತಿದೆ. ಸೋಂಕು ಅಧಿಕ ಪ್ರಮಾಣದಲ್ಲಿದ್ದರೂ, ಆರೋಗ್ಯ ವ್ಯವಸ್ಥೆ ಸುಧಾರಣೆ ಹಾಗೂ ಕೊರೋನಾ ಮೊದಲ ಅಲೆ ವೇಳೆ ಕಲಿತ ಪಾಠಗಳಿಂದಾಗಿ ಸಾವಿನ ಪ್ರಮಾಣ ಕಡಿಮೆ ಇದೆ.

➘ 13

**ಜನರು ನಿರ್ಲಕ್ಷ್ಯ ತೋರಿದರೆ ಕೊರೋನಾ ಸೋಂಕು ಉಲ್ಬಣವಾಗುವ ಅಪಾಯದ ಬಗ್ಗೆ ಕನ್ನಡಪ್ರಭ ನಿರಂತರವಾಗಿ ಎಚ್ಚರಿಸುತ್ತಲೇ ಬಂದಿದೆ. ಯುರೋಪ್ ರಾಷ್ಟ್ರಗಳಲ್ಲಿ 2ನೇ ಅಲೆ ಎದ್ದಿರುವ ಬಗ್ಗೆ ಸೆ.11ರಂದೇ ವರದಿ ಮಾಡಿತ್ತು. ಲಾಕ್‌ಡೌನ್ ಅಲ್ಲದಿದ್ದರೂ ಹಲವು ನಿರ್ಬಂಧಗಳನ್ನು ಹೇರಿದ ಬಗ್ಗೆ ಅ.19ಕ್ಕೆ ವರದಿ ಮಾಡಿತ್ತು. ಭಾರತದಲ್ಲೂ ಈ ಪರಿಸ್ಥಿತಿ ತಲೆದೋರಬಹುದು ಎಂದು ಜಾಗೃತಿ ಮೂಡಿಸುವ ಪ್ರಯತ್ನ ಮಾಡಿತ್ತು.**


ಅನ್‌ಲಾಕ್ ಬಳಿಕ ಎಚ್ಚರ ತಪ್ಪಿದ ಜನರು | ಸುರಕ್ಷತೆ ಇಲ್ಲದೆ ಓಡಾಟ
ಕೊರೋನಾ 2ನೇ ಅಲೆ ಭೀತಿ!
6 ದೇಶಗಳಲ್ಲಿ 2ನೇ ಅಲೆ:
10 ರಾಜ್ಯಗಳಲ್ಲೂ ಆತಂಕ
ಯುರೋಪ್‌ನಲ್ಲಿ 2ನೇ ಅಲೆ ತಪ್ಪಿಸಲು ಹಲವೆಡೆ ನಿರ್ಬಂಧ
ಸೋಂಕು ನಿಗ್ರಹಿಸಲು ಲಾಕ್‌ಡೌನ್ ಬದಲು ನಿರ್ಬಂಧ ಹೇರಿಕೆ
ಎಲ್ಲಿ ಏನು?



| ದೇಶ | ಆಗ | ಈಗ |
|---|---|---|
| ಫ್ರಾನ್ಸ್ | 7000 ಕೇಸು | 50000 ಕೇಸು |
| ಜರ್ಮನಿ | 6900 ಕೇಸು | 14000 ಕೇಸು |
| ಇಟಲಿ | 6500 ಕೇಸು | 24000 ಕೇಸು |
| [illegible] | 1000[illegible] | [illegible]0000 ಕೇಸು |
| ಬ್ರಿಟನ್ | 7000 ಕೇಸು | 25000 ಕೇಸು |

★ ಪ್ರತಿನಿತ್ಯದ ಗರಿಷ್ಠ ಪ್ರಕರಣಗಳು

### ಎಲ್ಲಿ ಏನು ನಿರ್ಬಂಧ?

1. **ಫ್ರಾನ್ಸ್:** ಡಿ.1ರವರೆಗೆ ಲಾಕ್‌ಡೌನ್. ಅಗತ್ಯ ವಸ್ತುಗಳಿಗಾಗಿ ಮಾತ್ರ ಹೊರಬರಲು ಅವಕಾಶ. ಅಂತಾರಾಷ್ಟ್ರೀಯ ಗಡಿ ಬಂದ್
2. **ಜರ್ಮನಿ:** ಸರಳ ಲಾಕ್‌ಡೌನ್. ರೆಸ್ಟೋರೆಂಟ್, ಪಬ್, ಥಿಯೇಟರ್ ಬಂದ್. 10ಕ್ಕಿಂತ ಹೆಚ್ಚು ಜನ ಒಂದೆಡೆ ಸೇರುವಂತಿಲ್ಲ
3. **ಇಟಲಿ:** ಅ.25ರಿಂದಲೇ ದೇಶವ್ಯಾಪಿ ರಾತ್ರಿ ಕರ್ಫ್ಯೂ. ರಾತ್ರಿ 11ರಿಂದ ಬೆಳಗ್ಗೆ 6ರವರೆಗೆ ಜನರ ಓಡಾಟಕ್ಕೆ ಪೂರ್ಣ ನಿರ್ಬಂಧ
4. **ಚೆಕ್, ಐರ್ಲೆಂಡ್:** ಚೆಕ್ ಗಣರಾಜ್ಯದಲ್ಲಿ ಈಗಾಗಲೇ ಭಾಗಶಃ ಲಾಕ್‌ಡೌನ್. ಐರ್ಲೆಂಡ್‌ನಲ್ಲೂ 2ನೇ ಹಂತದ ಲಾಕ್‌ಡೌನ್
5. **ಬ್ರಿಟನ್:** ನಿತ್ಯ 25 ಸಾವಿರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗುತ್ತಿರುವ ಬ್ರಿಟನ್‌ನಲ್ಲಿ ಹಲವು ರೀತಿಯ ನಿರ್ಬಂಧಗಳು ಜಾರಿ

# ದಿಲ್ಲಿಗೆ 3ನೇ ಅಲೆ ಭೀತಿ

### ಸತತ 2ನೇ ದಿನ 5000+ ಕೇಸ್ ದಾಖಲು

ನವದೆಹಲಿ: ದೆಹಲಿಯಲ್ಲಿ ಸತತ 2ನೇ ದಿನವಾದ ಗುರುವಾರ ಕೂಡಾ 5000ಕ್ಕಿಂತ ಹೆಚ್ಚು ಕೊರೋನಾ ಪ್ರಕರಣಗಳು ದಾಖಲಾಗಿವೆ. ಇದರೊಂದಿಗೆ ರಾಜಧಾನಿಯಲ್ಲಿ ಕೊರೋನಾದ ಮೂರನೇ ಅಲೆಯ ಭೀತಿ ಎದುರಾಗಿದೆ. ಈ ಕುರಿತು ಪ್ರತಿಕ್ರಿಯೆ ನೀಡಿರುವ ದೆಹಲಿಯ ಆರೋಗ್ಯ ಖಾತೆ ಸಚಿವ ಸತ್ಯೇಂದ್ರ ಜೈನ್, '3ನೇ ಅಲೆ ಎದ್ದಿದೆ ಎಂಬುದನ್ನು ಈಗಲೇ ಹೇಳಲು ಆಗದು. ಇನ್ನೂ 1 ವಾರ ಕಾಯಬೇಕು. ಆದರೆ ನಾವು ಈಗಾಗಲೇ ಆ ಹಂತ ಪ್ರವೇಶಿಸಿರುವ ಸಾಧ್ಯತೆ ಇದೆ' ಎಂದು ಹೇಳಿದ್ದಾರೆ. ದೆಹಲಿಯಲ್ಲಿ ಬುಧವಾರ 5,600 ಹೊಸ ಕೇಸು ದಾಖಲಾಗಿತ್ತು. ಹೊಸ ಪ್ರಕರಣಗಳ ಸಂಖ್ಯೆ 5000 ಗಡಿ ದಾಟಿದ್ದು ಇದೇ ಮೊದಲು. ಅದರ ಬೆನ್ನಲ್ಲೇ ಗುರುವಾರ ಮತ್ತೆ 5739 ಹೊಸ ಕೇಸು ದಾಖಲಾಗಿವೆ. ಸತತ 2ನೇ ದಿನವೂ 5000ಕ್ಕಿಂತ ಹೆಚ್ಚು ಹೊಸ ಕೇಸು ದಾಖಲಾದ ಹಿನ್ನೆಲೆಯಲ್ಲಿ ರಾಜಧಾನಿಯಲ್ಲಿ ಆತಂಕ ಶುರುವಾಗಿದೆ.

# ರಾಜ್ಯದಲ್ಲಿ ಸೋಂಕು ಭಾರೀ ಇಳಿಮುಖ

### ಪಾಸಿಟಿವಿಟಿ ದರ ಶೇ.10ರಿಂದ ಶೇ.5ಕ್ಕೆ | ಶೇ.90 ಮಂದಿ ಸೋಂಕಿತರು ಚೇತರಿಕೆ

ಬೆಂಗಳೂರು: ರಾಜ್ಯದಲ್ಲಿ ಕೊರೋನಾ ಸೋಂಕಿನ ಪ್ರಮಾಣ ಕಳೆದೊಂದು ತಿಂಗಳಲ್ಲಿ ತೀವ್ರವಾಗಿ ಇಳಿಮುಖವಾಗುತ್ತಿದೆ. ಅಕ್ಟೋಬರ್ ಆರಂಭದ ದಿನಗಳಲ್ಲಿ ಶೇ.10ಕ್ಕಿಂತ ಹೆಚ್ಚು ಇರುತ್ತಿದ್ದ ಪಾಸಿಟಿವಿಟಿ ದರ ಈಗ ಶೇ.5ಕ್ಕಿಂತ ಕೆಳಕ್ಕೆ ಇಳಿದಿದೆ. ಅಲ್ಲದೆ, ಶೇ.90ರಷ್ಟು ಕೊರೋನಾ ಸೋಂಕಿತರು ಚೇತರಿಸಿಕೊಂಡಿದ್ದಾರೆ. ಜನರು ಮುನ್ನೆಚ್ಚರಿಕೆ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದ್ದೇ ಆದಲ್ಲಿ, ರಾಜ್ಯವು ಕೊರೋನಾ ಸೋಂಕಿನ ವಿರುದ್ಧದ ಹೋರಾಟದಲ್ಲಿ ಗಣನೀಯ ಯಶಸ್ಸು ಸಾಧಿಸುವುದರಲ್ಲಿ ಅನುಮಾನವೇ ಇಲ್ಲ.

➘ 8

# ಫ್ರಾನ್ಸ್, ಜರ್ಮನಿ ಮತ್ತೆ ಲಾಕ್‌ಡೌನ್!

◀ ಮೊದಲ ಪುಟದಿಂದ

**ಫ್ರಾನ್ಸ್‌ನಲ್ಲಿ ಲಾಕ್‌ಡೌನ್:** ದೇಶವನ್ನುದ್ದೇಶಿಸಿ ಮಾತನಾಡಿದ ಫ್ರಾನ್ಸ್ ಅಧ್ಯಕ್ಷ ಎಮ್ಯಾನ್ಯುಯೆಲ್ ಮ್ಯಾಕ್ರೋನ್, ಶುಕ್ರವಾರದಿಂದ ಡಿ.1ರವರೆಗೆ ಫ್ರಾನ್ಸ್ ದೇಶದಲ್ಲಿ ಲಾಕ್‌ಡೌನ್ ಜಾರಿಯ ನಿರ್ಧಾರ ಪ್ರಕಟಿಸಿದ್ದಾರೆ. ಈ ಅವಧಿಯಲ್ಲಿ ವೈದ್ಯಕೀಯ ಚಿಕಿತ್ಸೆ, ದಿನಸಿ ಸಾಮಾನು ಖರೀದಿಯಂತಹ ಅವಶ್ಯ ಚಟುವಟಿಕೆಗಳಿಗೆ ಮಾತ್ರ ಜನರು ಮನೆಯಿಂದ ಹೊರಬರಬೇಕು. ಹಾಗೆ ಬರುವ ಮುನ್ನ ನಿಗದಿತ ಅರ್ಜಿ ಭರ್ತಿ ಮಾಡಬೇಕು. ಪ್ರತಿ 15 ದಿನಕ್ಕೊಮ್ಮೆ ಪರಿಸ್ಥಿತಿ ಪರಾಮರ್ಶೆ ನಡೆಸಲಾಗುತ್ತದೆ. ಶಾಲೆಗಳು ತೆರೆದಿರುತ್ತವೆ ಎಂದು ಹೇಳಿದರು.

ಅಂತಾರಾಷ್ಟ್ರೀಯ ಗಡಿ ಮುಚ್ಚಲಾಗುತ್ತದೆ. ಸ್ವ ಉದ್ಯೋಗಿಗಳು, ಅಂಗಡಿ ವ್ಯಾಪಾರಿಗಳು, ಸಣ್ಣ- ಮಧ್ಯಮ ಉದ್ದಿಮೆಗಳಿಗೆ ಲಾಕ್‌ಡೌನ್‌ನಿಂದ ಸಂಕಷ್ಟವಾಗಲಿದ್ದು ಅವರಿಗೆ ವಿಶೇಷ ಯೋಜನೆ ರೂಪಿಸಲಾಗುತ್ತದೆ. ಫ್ರಾನ್ಸ್‌ನಲ್ಲಿ ಕಳೆದ ಕೆಲವು ತಿಂಗಳುಗಳಿಂದ ಕೊರೋನಾ ಬಾಧಿತ ಪ್ರದೇಶಗಳಲ್ಲಿ ಕರ್ಫ್ಯೂ ಹೇರಲಾಗಿತ್ತು. ಆದರೆ ಅದರಿಂದ ಸೋಂಕು ನಿಯಂತ್ರಣಕ್ಕೆ ಬಾರದ ಹಿನ್ನೆಲೆಯಲ್ಲಿ ಲಾಕ್‌ಡೌನ್ ಮೊರೆ ಹೋಗಲಾಗಿದೆ.

ಫ್ರಾನ್ಸ್‌ನಲ್ಲಿ ಮಾರ್ಚ್‌ನಲ್ಲಿ ಕೊರೋನಾ ಮೊದಲ ಅಲೆ ಇದ್ದಾಗ ಗರಿಷ್ಠ ಎಂದರೆ ದಿನವೊಂದಕ್ಕೆ ಸರಾಸರಿ 7000 ಕೇಸು ವರದಿಯಾಗುತ್ತಿದ್ದವು. ಆದರೆ ಈಗ ಒಂದೇ ದಿನ 52 ಸಾವಿರದವರೆಗೂ ಪ್ರಕರಣಗಳು ಪತ್ತೆಯಾಗಿವೆ. ಏಪ್ರಿಲ್‌ನಲ್ಲಿ ಒಂದೇ ದಿನ 1400ಕ್ಕೂ ಅಧಿಕ ಸಾವು ಸಂಭವಿಸಿದ ನಿದರ್ಶನವಿತ್ತು. ಆದರೆ ಈಗ ದೈನಂದಿನ ಸಂಖ್ಯೆ 525ರ ಗಡಿ ದಾಟುತ್ತಿಲ್ಲ.

**ಜರ್ಮನಿಯಲ್ಲಿ ಲಘು ಲಾಕ್‌ಡೌನ್:** ಜರ್ಮನಿಯಲ್ಲಿ ಕೊರೋನಾ ಪ್ರಕರಣಗಳು ಅಧಿಕವಾಗುತ್ತಿರುವ ಹಿನ್ನೆಲೆಯಲ್ಲಿ ನ.2ರಿಂದ ಸರಳ ಲಾಕ್‌ಡೌನ್ ಜಾರಿಗೊಳಿಸಲಾಗುತ್ತಿದೆ. ಅದರ ಪ್ರಕಾರ, ದೇಶದಲ್ಲಿ ರೆಸ್ಟೋರೆಂಟ್, ಪಬ್‌ಗಳನ್ನು ನವೆಂಬರ್‌ನಾದ್ಯಂತ ಮುಚ್ಚಲಾಗುತ್ತದೆ. ಸಿನಿಮಾ ಮಂದಿರ, ವ್ಯಾಪಾರ ಮೇಳ, ರಂಗಮಂದಿರ ಹಾಗೂ ಫಿಟ್ನೆಸ್ ಕೇಂದ್ರಗಳು ಕೂಡ ಕಾರ್ಯನಿರ್ವಹಿಸುವಂತಿಲ್ಲ. ಶಾಲೆಗಳಿಗೆ ವಿನಾಯಿತಿ ಇದೆ. ಕ್ರೀಡಾ ಸ್ಪರ್ಧೆಗಳನ್ನು ಪ್ರೇಕ್ಷಕರಿಲ್ಲದೆ ನಡೆಸಬೇಕು. 10ಕ್ಕಿಂತ ಹೆಚ್ಚು ಜನ ಒಂದು ಕಡೆ ಒಟ್ಟಿಗೆ ಸೇರುವಂತಿಲ್ಲ ಎಂದು ಜರ್ಮನಿಯ ಚಾನ್ಸಲರ್ ಏಂಜೆಲಾ ಮರ್ಕೆಲ್ ತಿಳಿಸಿದ್ದಾರೆ.

ಜರ್ಮನಿಯಲ್ಲಿ ಬುಧವಾರ 14 ಸಾವಿರ ಸೋಂಕಿತರು ಪತ್ತೆಯಾಗಿದ್ದರು. ಕೊರೋನಾ ಮೊದಲ ಅಲೆ ಇದ್ದಾಗ ಮಾರ್ಚ್‌ನಲ್ಲಿ ದಿನವೊಂದಕ್ಕೆ ಗರಿಷ್ಠ ಎಂದರೆ 6900 ಪ್ರಕರಣ ಪತ್ತೆಯಾಗಿದ್ದವು. ಏಪ್ರಿಲ್‌ನಲ್ಲಿ ದಿನವೊಂದಕ್ಕೆ 300 ಸಾವು ಸಂಭವಿಸಿದ್ದ ಈ ದೇಶದಲ್ಲಿ ಈಗ ದೈನಂದಿನ ಸಾವು 100ರ ಗಡಿಯನ್ನು ದಾಟುತ್ತಿಲ್ಲ.

**ಸ್ಪೇನ್‌ನಲ್ಲಿ ಸೋಂಕು ಡಬಲ್:** ಸ್ಪೇನ್‌ನಲ್ಲಿ ಮಾರ್ಚ್ ತಿಂಗಳಿನಲ್ಲಿ ದಿನವೊಂದಕ್ಕೆ 10 ಸಾವಿರ ಪ್ರಕರಣ ಕಂಡು ಬಂದಿದ್ದವು. ಈಗ 20 ಸಾವಿರ ಪ್ರಕರಣ ವರದಿಯಾಗುತ್ತಿವೆ. 950ರ ಆಸುಪಾಸಿನಲ್ಲಿದ್ದ ಸಾವಿನ ಸಂಖ್ಯೆ 250ಕ್ಕೆ ಇಳಿದಿದೆ. ಕೊರೋನಾ ಹತ್ತಿಕ್ಕಲು ಅ.25ರಿಂದ ದೇಶಾದ್ಯಂತ ಕರ್ಫ್ಯೂ ಜಾರಿ ಮಾಡಲಾಗಿದೆ. ಹೀಗಾಗಿ ರಾತ್ರಿ 11ರಿಂದ ಬೆಳಗ್ಗೆ 6ರವರೆಗೆ ಜನರು ಮನೆಯಿಂದ ಹೊರಬರುವಂತಿಲ್ಲ.

**ಇತರೆಡೆ ಹೇಗಿದೆ?:** ಚೆಕ್ ಗಣರಾಜ್ಯದಲ್ಲಿ ಭಾಗಶಃ ಲಾಕ್‌ಡೌನ್ ಇದೆ. ಐರ್ಲೆಂಡ್‌ನಲ್ಲಿ ಆರು ವಾರಗಳ 2ನೇ ಹಂತದ ಲಾಕ್‌ಡೌನ್ ಜಾರಿ ಮಾಡಲಾಗಿದೆ. ಬ್ರಿಟನ್‌ನಲ್ಲಿ ಏಪ್ರಿಲ್‌ನಲ್ಲಿ ಒಂದೇ ದಿನ ದಾಖಲೆಯ 7 ಸಾವಿರ ಪ್ರಕರಣ ಪತ್ತೆಯಾಗಿದ್ದವು. ಆದರೆ ಈಗ 25 ಸಾವಿರಕ್ಕೆ ಹೆಚ್ಚಳವಾಗಿದೆ.

**ಪಾಕ್‌ನಲ್ಲೂ ಲಾಕ್‌ಡೌನ್:** ಕೊರೋನಾ ಸೋಂಕು ನಿಯಂತ್ರಣಕ್ಕಾಗಿ ಪಾಕಿಸ್ತಾನ ಸರ್ಕಾರ ಮತ್ತೆ ದೇಶಾದ್ಯಂತ ಭಾಗಶಃ ಲಾಕ್‌ಡೌನ್ ಹೇರಿದೆ. ಮೆಡಿಕಲ್, ಆಸ್ಪತ್ರೆ ಸೇರಿ ಇನ್ನಿತರ ತುರ್ತು ಸೇವೆಗಳು ಹೊರತುಪಡಿಸಿ ಮಾಲ್‌ಗಳು, ಮಾರುಕಟ್ಟೆಗಳು ರಾತ್ರಿ 10 ಗಂಟೆ ನಂತರ ತೆರೆಯುವಂತಿಲ್ಲ.



## ಇಟಲಿ ಮತ್ತೆ ತತ್ತರ

ಮಾರ್ಚ್– ಏಪ್ರಿಲ್‌ನಲ್ಲಿ ಕಂಡುಬಂದ ಕೊರೋನಾ ಮೊದಲ ವೇಳೆ ಅತಿ ಹೆಚ್ಚು ನಲುಗಿದ್ದ ದೇಶವಾಗಿದ್ದ ಇಟಲಿಯಲ್ಲಿ ಈಗ ಸೋಂಕು ಹಿಂದೆಂದಿಗಿಂತ ಹೆಚ್ಚಾಗಿದೆ. ಮಾರ್ಚ್‌ನಲ್ಲಿ ಒಂದೇ ದಿನ 6500 ಕೇಸು ದಾಖಲಾಗಿದ್ದರಿಂದ ಇಟಲಿ ಸಮಸ್ಯೆಗೆ ಈಡಾಗಿತ್ತು. ಈಗ ದೈನಂದಿನ ಪ್ರಕರಣ 24 ಸಾವಿರದವರೆಗೂ ತಲುಪಿದೆ. ಆದರೆ ಸಾವಿನ ಸಂಖ್ಯೆ ಮಾರ್ಚ್‌ನಲ್ಲಿ 920 ಇದ್ದದ್ದು ಈಗ ನಿತ್ಯ 200ರ ಆಸುಪಾಸಿನಲ್ಲಿದೆ. ಕೊರೋನಾ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಇಟಲಿಯಲ್ಲಿ ಸಂಜೆ 6ರ ನಂತರ ಎಲ್ಲ ಬಾರ್ ಹಾಗೂ ರೆಸ್ಟೋರೆಂಟ್‌ಗಳನ್ನು ಮುಚ್ಚಲಾಗುತ್ತಿದೆ. ಜಿಮ್, ಈಜುಕೊಳ, ರಂಗಮಂದಿರ, ಚಿತ್ರಮಂದಿರಗಳು ಬಾಗಿಲು ತೆರೆಯುವಂತಿಲ್ಲ. ಮ್ಯೂಸಿಯಂಗಳು ಕಾರ್ಯನಿರ್ವಹಿಸಬಹುದು. ವಿವಾಹ, ಅಂತ್ಯಕ್ರಿಯೆ, ಧಾರ್ಮಿಕ ಕಾರ್ಯಕ್ರಮಗಳಿಗೆ ಜನರ ಜಮಾವಣೆ ನಿಷೇಧಿಸಲಾಗಿದೆ. ಶಾಲೆಗಳು ಹಾಗೂ ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ.

# ರಾಜ್ಯದಲ್ಲಿ ಸೋಂಕು ಭಾರೀ ಇಳಿಮುಖ

◀ ಮೊದಲ ಪುಟದಿಂದ

**ಸಕ್ರಿಯ ಕೇಸ್ ಶೇ.50 ಇಳಿಕೆ:** ಅ.1ರಂದು ರಾಜ್ಯದಲ್ಲಿ 1.10 ಲಕ್ಷ ಸಕ್ರಿಯ ಪ್ರಕರಣಗಳಿದ್ದವು. ಆದರೆ ಅ.28ರ ಹೊತ್ತಿಗೆ ಇದು 68,161ಕ್ಕೆ ಕುಸಿದಿದೆ. ಹಾಗೆಯೇ ಈ ಅವಧಿಯಲ್ಲಿ ಸೋಂಕಿನಿಂದ ಗುಣಮುಖರಾದವರ ಸಂಖ್ಯೆ 4.92 ಲಕ್ಷ ಮಂದಿಯಿಂದ 7.33 ಲಕ್ಷಕ್ಕೆ ಏರಿದೆ. ರಾಜ್ಯದಲ್ಲಿ ಸದ್ಯ ಶೇ.8.4ರಷ್ಟು ಸಕ್ರಿಯ ಪ್ರಕರಣಗಳಿದ್ದು, ಶೇ.1.4 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ ಎಂದು ಕಳೆದ 28 ದಿನಗಳಲ್ಲಿ ಕೊರೋನಾ ಸೋಂಕಿನ ಸ್ಥಿತಿಗತಿಯಲ್ಲಿ ರಾಜ್ಯ ಸ್ಥಿರವಾದ ಪ್ರಗತಿ ಸಾಧಿಸಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

ಅಕ್ಟೋಬರ್‌ನ ಆರಂಭದ ದಿನಗಳಲ್ಲಿ ಏರುಗತಿಯಲ್ಲಿ ವರದಿಯಾಗುತ್ತಿದ್ದ



ಕೊರೋನಾ ಪ್ರಕರಣಗಳ ಸಂಖ್ಯೆ ಅ.10ರ ಬಳಿಕ ಇಳಿಕೆ ಹಾದಿಯಲ್ಲಿ ಸಾಗಿದೆ. ಅದರಲ್ಲೂ ಅ.15ರ ಬಳಿಕ ಪ್ರತಿದಿನ ಗುಣಮುಖರ ಸಂಖ್ಯೆಯೇ ಹೆಚ್ಚಾಗಿ ವರದಿಯಾಗುತ್ತಿದೆ. ದಿನನಿತ್ಯ ಶೇ.10ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿರುತ್ತಿದ್ದ ಪಾಸಿಟಿವಿಟಿ ದರ ಇದೀಗ ಶೇ.5ಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿ ವರದಿಯಾಗುತ್ತಿದೆ ಎಂದಿದ್ದಾರೆ.